ಆದ್ದರಿಂದ ಸಂಪೂರ್ಣ ಅಧಿಕಾರ ಅವರಿಗೆ ಕೊಟ್ಟಿದ್ದೇವೆ ಎಂದು ಅಲ್ಲ. ಈ ಗೈಡ್ಲೈನ್ಸ್ ವಿಚಾರ ಹುಟ್ಟಿದ್ದೇ, ಇಲ್ಲಿ ಚರ್ಚೆ ಆದ ನಂತರ. ತಾವೆಲ್ಲರೂ ಕೇಳಿದಮೇಲೆ ಗೈಡ್ಲೈನ್ಸ್ ಕೊಟ್ಟಿದ್ದೇವೆ. ಆದಕಾರಣ ಇದರಲ್ಲಿ ನಾವು ನಮ್ಮ ಜನತೆಯ ಅಧಿಕಾರ ಮೊಟಕು ಮಾಡಿ ಅಧಿಕಾರಸ್ಥರು ಸ್ವೇಚ್ಛೆಯಿಂದ ಏನಾದರೂ ಮಾಡುವುದಕ್ಕೆ ಎಳ್ಳಷ್ಟು ಅಧಿಕಾರ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(4) ಮುಧೋಳ್ ಮತ್ತು ಬಿಜಾಪುರದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ತೊಂದರೆ

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಯಾವುದಾದರೂ ಒಂದು ಸಮಸ್ಯೆ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದಮೇಲೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಮಂತ್ರಿಗಳು ಉತ್ತರ ಕೊಟ್ಟಮೇಲೆ ಆಕ್ಷನ್ನಲ್ಲಿ ಅದು ಬರಬೇಕಲ್ಲವೇ? ಗುರುವಾರದ ದಿವಸ ಮುಧೋಳ್ ಮತ್ತು ಬಿಜಾಪುರದ ರೈತರಿಗೆ ಆಗಿರುವ ತೊಂದರೆ ಬಗ್ಗೆ ಪ್ರಸ್ತಾಪ ಮಾಡಿದೆ. ಅಲ್ಲಿ ಅವರು ಕಬ್ಬನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಾ ಇಲ್ಲ, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಏನಾದರೂ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ ಮಾನ್ಯ ಸಚಿವರಾದ ಲಮಾಣಿಯವರು ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದರು. ಇವತ್ತು ಅಲ್ಲಿರತಕ್ಕ ರೈತರು ಒತ್ತಾಯ ಮಾಡುತ್ತಿದ್ದಾರೆ. ಅವರಿಗೆ ಬಹಳ ತೊಂದರೆಯಾಗಿದೆ. ಅವರು ಹೇಳಿಕೆ ಕೊಟ್ಟಮೇಲೆ ಮತ್ತೆ ಅಲ್ಲಿ ತಡೆಹಿಡಿಯೋದು ಜಾಸ್ತಿ ಆಗಿದೆ. ದಯವಿಟ್ಟು ಇವತ್ತು ಉತ್ತರವನ್ನು ತಾವು ಕೊಡಿಸಬೇಕಾಗುತ್ತದೆ. ತಮ್ಮ ರಕ್ಷಣೆಯನ್ನು ನಾನು ಕೇಳುತ್ತಿದ್ದೇನೆ. ದಯವಿಟ್ಟು ಮಂತ್ರಿಗಳನ್ನು ಕರೆಸಿ ಸಂಜೆಯೊಳಗೆ ಉತ್ತರವನ್ನು ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಸೋಮವಾರ ಉತ್ತರ ಕೊಡುತ್ತೇವೆಂದು ಹೇಳಿದ್ದರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಆವತ್ತೇ ಜಿಲ್ಲಾಧಿಕಾರಿಗಳು ಹಾಗೂ ಶುಗರ್ ಡೈರೆಕ್ಟರ್ ಜೊತೆ ಮಾತನಾಡಿ ಸಂಜೆಯೊಳಗೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಈಗ 2-3 ದಿವಸಗಳೇ ಆಗಿವೆ. ಮುಧೋಳದ ಕಬ್ಬು ಬೆಳೆಗಾರರು ತೊಂದರೆ ಅನುಭವಿಸುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ. ಕೇವಲ ಬೇಜವಾಬ್ದಾರಿಯಿಂದ ಹೊರಟು ಹೋದರೆ ನಾವು ಏಕೆ ವಿಚಾರ ಎತ್ತಬೇಕು? ಕೇವಲ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಬರಬೇಕೆಂದು ಮಾಡಬೇಕೋ ಅಥವಾ ಸಮಸ್ಯೆ ಪರಿಹರಿಸಬೇಕೋ? ಎಲ್ಲದಕ್ಕೂ ಸಂಸದೀಯ ಸಚಿವರು....

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಆಕ್ಷನ್ ತೆಗೆದುಕೊಂಡಿರುವ ಬಗ್ಗೆ ಸಂಜೆಯೊಳಗೆ ಸ್ಟೇಟ್ಮೆಂಟ್ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಇದು ನನ್ನ ಗೌರವದ ಪ್ರಶ್ನೆ ಅಲ್ಲ. ಎಂಟೈರ್ ಸಿಸ್ಟಮ್ ಕೊಲ್ಯಾಪ್ಸ್ ಆಗುತ್ತದೆ. ನಿಮ್ಮನ್ನು ಯಾರೂ ಕೇಳುವುದಿಲ್ಲ. ಅಧಿಕಾರಿಗಳು ನಿಮ್ಮನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ, ಸುಮ್ಮನೆ ಹೇಳುತ್ತಾರೆ ಅಸೆಂಬ್ಲಿಯಲ್ಲಿ, ಬಿಡ್ರಿ ಎಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳನ್ನು ಕರೆಸಿ, ಶುಗರ್ ಡೈರೆಕ್ಟರ್ ಕರೆಸಿ ಏನು ಮಾಡುತ್ತಿದ್ದಾರೆಂದು ಕೇಳುತ್ತಿದ್ದಾರೆಂದು ಕೇಳುವ ಯೋಗ್ಯತೆ ಇಲ್ಲವೇ ಇವರಿಗೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಕೇಳಿದ್ದಾರೋ ಇಲ್ಲವೋ, ಅದನ್ನು ಸಂಜೆ ಒಳಗೆ ಹೇಳುತ್ತೇನೆ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ.